**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾದಂ.ರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ.4/2023**

ಫಿರ್ಯಾದಿ : ಸರ್ಕಾರದ ಪರವಾಗಿ ಸರಗೂರು ಪೋಲೀಸ್ ಠಾಣೆ

– ವಿರುದ್ಧ –

ಆರೋಪಿಗಳು :

1. ವೆಂಕಟೇಶನಾಯಕ
   ಬಿನ್ ವೆಂಕಟನಾಯಕ
   62 ವರ್ಷ
2. ಗೋವಿಂದನಾಯಕ
   ಬಿನ್ ವೆಂಕಟೇಶನಾಯಕ
   40 ವರ್ಷ
3. ರೇಖಾ
   ಬಿನ್ ಗೋವಿಂದನಾಯಕ
   35 ವರ್ಷ

   ಆರೋಪಿ ನಂ.1 ರಿಂದ 3 ರವರ ವಾಸಃ
   ವಾರ್ಡ್ ನಂ.1, ಸರಗೂರು ಟೌನ್,
   ಸರಗೂರು ತಾಲ್ಲೂಕು,
   ಮೈಸೂರು ಜಿಲ್ಲೆ.

4. ಶಿವಣ್ಣನಾಯಕ
   ಬಿನ್ ಚಿಕ್ಕನಾಯಕ
   58 ವರ್ಷ, ವಾಸಃ ಮೊಸರಹಳ್ಳ ಗ್ರಾಮ,
   ಸರಗೂರು ತಾಲ್ಲೂಕು,
   ಮೈಸೂರು ಜಿಲ್ಲೆ.
5. ವೆಂಕಟನಾಯಕ
   ಬಿನ್ ಲೇಟ್ ಚನ್ನನಾಯಕ

87 ವರ್ಷ, ವಾಸಃ ವಾರ್ಡ್ ನಂ.1,
ಸರಗೂರು ಟೌನ್,
ಸರಗೂರು ತಾಲ್ಲೂಕು,
ಮೈಸೂರು ಜಿಲ್ಲೆ.

## ದೋಷಾರೋಪಣೆ

ಶ್ರೀ ಸುರೇಶ.ಎಸ್.ಎನ್., ಬಿ.ಎ., ಎಲ್.ಎಲ್.ಬಿ, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಹೆಚ್.ಡಿ.ಕೋಟೆ ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 30.06.2022 ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಸರಗೂರು ಪೋಲೀಸ್ ಠಾಣಾ ಸರಹದ್ದು, ಹೊಸಬಿದರಹಳ್ಳಿ ಗ್ರಾಮದ ಸರ್ವೇ ನಂ.4 ರ ಜಮೀನಿನಲ್ಲಿ 1 ರಿಂದ 5 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ವಿಧಿ ವಿರುದ್ಧ ಕೂಟ ರಚಿಸಿಕೊಂಡು ಬಂದಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂ.143 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ವಿಧಿ ವಿರುದ್ಧ ಕೂಟ ರಚಿಸಿಕೊಂಡು, ಚಾ.ಸಾ.1 ಮತ್ತು 2 ರವರೊಂದಿಗೆ ದೊಂಬಿ ಗಲಾಟೆ ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.147 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ವಿಧಿ ವಿರುದ್ಧ ಕೂಟ ರಚಿಸಿಕೊಂಡು ಕೈಯಲ್ಲಿ ಮಚ್ಚು ದೊಣ್ಣೆಗಳನ್ನು ಹಿಡಿದುಕೊಂಡು ಚಾ.ಸಾ.1 ಮತ್ತು 2 ರವರು ತಮ್ಮ ಜಮೀನಿನಲ್ಲಿ ನೆಟ್ಟಿದ್ದ ಕಲ್ಲು ಕಂಬಗಳನ್ನು ಮುರಿದು ಹಾಕಿ ಸುಮಾರು 30 ಸಾವಿರಗಳಷ್ಟು ನಷ್ಟ ಉಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.427 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ವಿಧಿ ವಿರುದ್ಧ ಕೂಟದ ಸದಸ್ಯರಾದ 1 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಮಚ್ಚಿನಿಂದ ಚಾ.ಸಾ.1 ರವರ ತಲೆಗೆ ಹೊಡೆಯಲು ಹೋದಾಗ ಅವರು ತನ್ನ ಕೈಯನ್ನು ಅಡ್ಡಿ ಹಿಡಿದ ಪರಿಣಾಮ ಅವರ ಕೈಗಳಿಗೆ ಗಾಯಗಳಾಗಿದ್ದು, 2 ನೇ ಆರೋಪಿಯಾದ ನೀವು ದೊಣ್ಣೆಯಿಂದ ಚಾ.ಸಾ.2 ರವರ ವಲ ಪಕ್ಕೆಗೆ ಹೊಡೆದು ಸ್ವ–ಇಚ್ಛೆಯಿಂದ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂ.324 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಐದನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ವಿಧಿ ವಿರುದ್ಧ ಕೂಟದ ಸದಸ್ಯರಾದ 3 ಮತ್ತು 4 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾ.ಸಾ.1 ಮತ್ತು 2 ರವರನ್ನು ಕುರಿತು "ಇವರುಗಳನ್ನು ಬಿಡಬೇಡಿ, ಕೊಲೆ ಮಾಡಿ" ಎಂದು

ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂ.506 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ವಿಧಿ ವಿರುದ್ಧ ಕೂಟದ ಸದಸ್ಯರಾದ 5 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಚಾ.ಸಾ.1 ಮತ್ತು 2 ರವರಿಗೆ ಹೊಡೆಯಿರಿ ಎಂದು ಇತರೆ ಆರೋಪಿಗಳಿಗೆ ಕುಮ್ಮಕ್ಕು ನೀಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ. ಕಲಂ.114 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಈ ಮೇಲಿನ ದೋಷಾರೋಪಣೆಗಳಿಗಾಗಿ ಆರೋಪಿಗಳಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದೆಂದು ನಿರ್ದೇಶಿಸಿರುತ್ತೇನೆ.

(ಆರೋಪಿಗಳಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿಗಳು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ 16.12.2023

(ಸುರೇಶ.ಎಸ್.ಎನ್.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಹೆಚ್.ಡಿ. ಕೋಟೆ.